**ಇ ಸಿ ಎ ನಂ. 01/ 2022**
**ಪಿ. ಡಬ್ಲ್ಯೂ 1.**

**ದಿನಾಂಕಃ 13-03-2024**

ಸಾಕ್ಷಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರಃ ಶ್ರೀ ಎಸ್ ಬಿ ವಕೀಲರಿಂದಃ**

ಸಾಕ್ಷಿ ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ನಿಜವಿರುತ್ತವೆ.

ಪ್ರ.ವ.ವರದಿಯನ್ನು ನಿಪಿ-1 , ದೂರು ನಿಪಿ-2 ಎಂದು , ಅಂತಿಮ ವರದಿ ನಿಪಿ-3 ಎಂದು, ಶವ ಪರೀಕ್ಷಾ ವರದಿ ನಿಪಿ-4 ಎಂದು , ಎಂ ವಿ ಆಯ ವರದಿ ನಿಪಿ-5 ಎಂದು, ಗುರುತಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ ಶ್ರೀ ವಿ ವಿ ಕೆ ವಕೀಲರಿಂದಃ**

ನಾನು ಘಟನೆಯನ್ನು ನೋಡಿರುವುದಿಲ್ಲ. ನನ್ನ ಮಗನು 1 ನೇ ಎದುರುದಾರರ ಬಳಿ ಕೆಲಸಕ್ಕೆ ಇದ್ದನು. ಸದರಿ ಅಪಘಾತದ ದಿವಸ ನನ್ನ ಮಗ ಟ್ರಾಕ್ಟರ ಚಲಾಯಿಸುತ್ತಿದ್ದ. ನನ್ನ ಮಗ 1 ನೇ ಎದುರುದಾರರಲ್ಲಿ ಚಾಲಕ ಕೆಲಸ ಮಾಡುತ್ತಿದ್ದ ಎಂದರೆ ಸರಿ. ನನ್ನ ಮಗನಿಗ ಚಾಲನೆ ಬರುತ್ತಿರಲ್ಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗನ ಚಾಲನಾ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ನನ್ನ ಮಗನಿಗೆ ಚಾಲನಾ ಪರವಾನಿಗೆ ಇದ್ದಿರುವುದಿಲ,ಇದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದಾಗ ಆತ ಬೇರೆ ಏಲ್ಲೋ ಕೆಲಸ ಮಾಡುತ್ತಿದ್ದ ಮತ್ತು ಅಪಘಾತದಲ್ಲಿ ತೀರಿಕೊಂಡಿದ್ದಾನೆ ಎಂದು ನಾನು ಸುಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ 1 ನೇ ಎದುರುದಾರ ಬಳಿ ಸುಮಾರು 2 ವರ್ಷದಿಂದ ಕೆಲಸಕ್ಕೆ ಇದ್ದ. ನನ್ನ ಮಗ ತಿಂಗಳಿಗೆ 20 ಸಾ.

ರೂ. ದುಡಿಯುತ್ತಿದ್ದ. ಸಂಬಂದಪಟ್ಟಂತೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ನನ್ನ ಮಗ ತಿಂಗಳಿಗೆ 20 ಸಾ.ರೂ. ದುಡಿಯುತ್ತಿದ್ದ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ನನ್ನ ಮಗ ಅವರ ಬಳಿ ಕೆಲಸಕ್ಕೆ ಇದ್ದರೆ ಅವರು ವಿಮಾ ಕಂಪನಿಗೆ ವಿಷಯ ತಿಳಿಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಮಗ 1 ನೇ ಎದುರುದಾರ ಬಳಿ ಯಾವುದೇ ಕೆಲಸಕ್ಕೆ ಇದ್ದಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಅರ್ಜಿದಾರರ ನನ್ನ ಗಂಡ ಮತ್ತು ಮೃತನಿಗೆ ತಂದೆ. ಆತನಿಗೆ ಮತ್ತು ನನಗೆ ದುಡಿಯಲು ಶಕ್ತಿ ಇದೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ಚಾಲನಾ ಪರವಾನಿಗೆ ಇರದ ಮೃತ ವ್ಯಕ್ತಿಗೆ ವಾಹನ ಚಲಾಯಿಸಲು ವಾಹನ ನೀಡಿ ವಿಮಾ ನಿಯಮವನ್ನು ಉಲ್ಲಂಘನೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಮೆಯು 3 ನೇ ಅರ್ಜಿದಾರರರಿಗೆ ಮಾತ್ರ ಸಂಬಂದಪಟ್ಟಿದ್ದು ಇರುತ್ತದೆ ಎಂದರೆ ಸರಿಯಲ್ಲ. ಪಾಲಿಸಿ ನಿಯಮಗಳನ್ನು ಉಲ್ಲಂಘನೆ ಮಾಡಿದ್ದರಿಂದ 2 ನೇ ಎದುರುದಾರರು ಭಾದ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ. ವಿಮೆಯು ಪ್ರಯಾಣಿಕರಿಗೆ ಪರಿಹಾರ ಕೊಡಲು ಬಾಧ್ಯಸ್ಥ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೇಳಿದ 20 ಲಕ್ಷಕ್ಕೆ ಯಾವುದೇ ಆಧಾರ ಇರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

**ಮರು ವಿಚಾರ್ಣೆಃ ಇಲ್ಲ.**

(ನನ್ನ ಉಕ್ತ ಲೇಖನದ ಮುಖಾಂತರ ಬೆರಳಚ್ಚುಗಾರಳಿಂದ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಯಾದಗಿರಿ